# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಖ್ಯಾತ ಉದ್ಯಮಿ ರತನ್ ಟಾಟಾ ಅವರು ನಾಗಪುರದ ಆರೆಸ್ಸೆಸ್ ಕೇಂದ್ರ ಕಛೇರಿಯಲ್ಲಿರುವ ಡಾ. ಹೆಡಗೇವಾರ್ ಪ್ರತಿಮೆಗೆ ಗೌರವ ಸಮರ್ಪಿಸುತ್ತಿರುವುದು.

ಸಂಪುಟ : 38 ಸಂಚಿಕೆ : 11 ದುರ್ಮುಖಿ–ಪುಷ್ಯ ಕಲಿಯುಗಾಬ್ದ 5118 15–1–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಇಸ್ಲಾಮಿಕ್ ತೀವ್ರವಾದಕ್ಕೆ ಉರಿಯುತ್ತಿದೆ ಬಂಗಾಳ ತಣಿಸುವವರಾರು?

ಇಂದಿನ ಸ್ಥಿತಿಗತಿಗಳ ಕಡೆ ಸ್ವಲ್ಪ ಗಮನ ಹರಿಸಿದರೆ ಸ್ಪಷ್ಟವಾಗಿ ತಿಳಿಯುವ ಸಂಗತಿಯೆಂದರೆ ನಿಧಾನವಾಗಿಯಾದರೂ ನಿಶ್ಚಿತವಾಗಿ ಕೇರಳ, ಉತ್ತರ ಪ್ರದೇಶ, ಜಮ್ಮು–ಕಾಶ್ಮೀರಗಳಂತೆಯೇ ಪಶ್ಚಿಮ ಬಂಗಾಳವೂ ಸಾಂಪ್ರದಾಯಿಕ ಮತೀಯ ದಂಗೆಗಳ ತನ್ನ ಕರಾಳ ಇತಿಹಾಸವನ್ನು ಮರುಕಳಿಸುವತ್ತ ಸಾಗಿರುವುದು. ಕಳೆದ ಡಿಸೆಂಬರ್ 12, 13 ರಂದು ಕೊಲ್ಕತ್ತಾದಿಂದ 28 ಕಿ.ಮೀ. ಪಶ್ಚಿಮಕ್ಕಿರುವ ಧುಲಾಗಢದಲ್ಲಿ ಜಿಹಾದಿಗಳು ಅಲ್ಲಿನ ಹಿಂದುಗಳ ಮೇಲೆ ವ್ಯವಸ್ಥಿತ ಹಾಗೂ ಪೂರ್ವಯೋಜಿತ ಹಿಂಸಾಚಾರ ನಡೆಸಿದರು. ಆದರೆ ಇಂತಹ ಘಟನೆಗಳು ಹೊರಜಗತ್ತಿಗೆ ಗೊತ್ತಾಗಬೇಕೆಂದು ನಮ್ಮ ಹುಸಿ–ಜಾತ್ಯತೀತವಾದಿ ರಾಷ್ಟ್ರೀಯ ಸುದ್ದಿಮಾಧ್ಯಮಗಳಿಗೆ, ಅದರಲ್ಲೂ ಬಹುತೇಕ ಟಿವಿ ವಾಹಿನಿಗಳಿಗೆ ಅನ್ನಿಸಲೇ ಇಲ್ಲ. ನಡೆದ ಘಟನೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಜನಸಾಮಾನ್ಯರು ನಿತ್ಯವೂ ಪ್ರಕಟಿಸುತ್ತಿದ್ದ ಸಚಿತ್ರ ವಿವರಣೆಗಳನ್ನು ಅಲ್ಲಗಳೆಯುವ ಯಾವುದೇ ಮಾರ್ಗ ಉಳಿಯದೇ ಹೋದ್ದರಿಂದ ಅನಿವಾರ್ಯವಾಗಿ ಮಾಧ್ಯಮಗಳಿಗೆ ತಮ್ಮ ಜವಾಬ್ದಾರಿ ನೆನಪಿಗೆ ಬಂತು.

## ನಡೆದ ಘಟನೆ ಇದು

ಡಿಸೆಂಬರ್ 12ರಂದು ಪಶ್ಚಿಮ ಬಂಗಾಳದಲ್ಲಿ ಮೊಹಮದ್ ಪೈಗಂಬರ್ ಜನ್ಮದಿನದ (ಈದ್–ಉಲ್–ನಬಿ) ನಿಮಿತ್ತ ಸರ್ಕಾರಿ ರಜೆ ಘೋಷಣೆಯಾಗಿತ್ತು. ಅದರ ಮರುದಿನ ಹಿಂದುಗಳಿಗೆ ಮಾರ್ಗಶೀರ್ಷ ಪೌರ್ಣಿಮೆಯ ಶುಭದಿನ. ಹಬ್ಬದಾಚರಣೆಗೆ ನಿಗದಿಯಾದ ಸರ್ಕಾರಿ ರಜೆ ಸಾಲಲಿಲ್ಲ ಎಂಬ ನೆಪವೊಡ್ಡಿ ಮುಸ್ಲಿಮರು ಮರುದಿನವೂ ಧುಲಾಗಢದಲ್ಲಿ ಮೆರವಣಿಗೆ ಹೊರಟರು. ಹಾಗೆ ಹೊರಟವರು ಬರಿಗೈಯಲ್ಲಿರಲಿಲ್ಲ, ಚಾಕು, ಕತ್ತಿ, ಬಡಿಗೆ ಮತ್ತು ಇತರೆ ಮಾರಕಾಸ್ತ್ರಗಳಿಂದ ಸನ್ನದ್ಧರಾಗೇ ಬಂದಿದ್ದರು. ಮೆರವಣಿಗೆಯ ಮಾರ್ಗದುದ್ದಕ್ಕೂ ಕಿವುಡಾಗಿಸುವ ಅಬ್ಬರದ ಸಂಗೀತದ ಹಿಮ್ಮೇಳವೂ ಇತ್ತು. ಮೆರವಣಿಗೆ ಹಿಂದೂ ಮೊಹಲ್ಲಾಗಳಲ್ಲಿ ಹಾಯ್ದುಹೋಗುವಾಗ ತಮ್ಮ ಧಾರ್ಮಿಕ ಕಾರ್ಯಗಳಿಗೆ ತೊಂದರೆಯಾದ್ದರಿಂದ ಅಬ್ಬರವನ್ನು ತಗ್ಗಿಸುವಂತೆ ಕೇಳಿಕೊಂಡಿದ್ದನ್ನೇ ನೆಪವಾಗಿಸಿ ಹಿಂದುಗಳ ಮೇಲೆ ಸಶಸ್ತ್ರ ದಾಳಿ ಮಾಡಿದರು ಮತಾಂಧರು. ಹಿಂದುಗಳ ಅಂಗಡಿಗಳು ಲೂಟಿಗೊಳಗಾದವು. ಗ್ರಾಮಸ್ಥರ ಪ್ರಕಾರ ಮಹಿಳೆಯರು, ಮುದುಕರೆನ್ನದೆ ಜನರನ್ನು ಮನೆಯಿಂದ ಹೊರಗೆಳೆದು ಅವರ ಮನೆಗಳಿಗೆ ಬೆಂಕಿ ಇಡಲಾಯಿತು. ಹಠಾತ್ ದಾಳಿಗೆ ತತ್ತರಿಸಿದ ಹಿಂದುಗಳು ತಮ್ಮ ಮತ್ತು ತಮ್ಮವರ ಜೀವ ಉಳಿಸಿಕೊಳ್ಳಲು ಊರುಬಿಟ್ಟು ದಿಕ್ಕಾಪಾಲಾಗಿ ಓಡಿಹೋದರು. ಘಟನಾಸ್ಥಳಕ್ಕೆ ಭೇಟಿಕೊಟ್ಟ ಪೋಲೀಸರ ಮೇಲೇ ಕೈಬಾಂಬುಗಳನ್ನೆಸೆಯಲಾಗಿದೆ ಎಂದರೆ ಅಲ್ಲಿನ ಜಿಹಾದಿ ಗೂಂಡಾಗಳ ವೈಷಮ್ಯದ ತೀವ್ರತೆ ಎಷ್ಟಿರಬಹುದೆಂಬುದರ ಅಂದಾಜು ಸಿಗಬಹುದು.



ಅದೇ ರಾಜ್ಯದಿಂದ ತಿಳಿದುಬಂದಿರುವ ಮತ್ತೊಂದು ಘಟನೆಯಲ್ಲಿ ಹೌರಾ ಜಿಲ್ಲೆಯ ತೆಹತ್ತಾ ಶಾಲೆಯ ಉಸ್ತುವಾರಿ ಶಿಕ್ಷಕರೊಬ್ಬರು ಉಲುಬೇರಿಯಾ ಪೋಲಿಸ್ ಠಾಣೆಗೆ ಸಲ್ಲಿಸಿದ ಲಿಖಿತ ದೂರಿನಂತೆ ಆ ಶಾಲೆಯ ಒಂಭತ್ತು ಮತ್ತು ಹತ್ತನೆಯ ತರಗತಿಯ ಕೆಲವು ವಿದ್ಯಾರ್ಥಿಗಳು ಇಸ್ಲಾಮಿ ಮೂಲಭೂತವಾದಿಗಳಿಂದ ಪ್ರೇರಿತರಾದ ಹೊರಗಿನವರ ಸಹಾಯದಿಂದ ಶಾಲೆಯ ಆವರಣದೊಳಕ್ಕೆ ನುಗ್ಗಿ ಬಲವಂತದಿಂದ ನಬಿ ದಿವಸವನ್ನು (ಮೊಹಮದ್ ಪೈಗಂಬರ್ ಜನ್ಮದಿನ) ಆಚರಿಸಿದರು. ಈ ಘಟನೆ ಶಾಲೆಯ ಶಿಕ್ಷಕ ಮತ್ತು ಇತರೆ ವಿದ್ಯಾರ್ಥಿಗಳಲ್ಲಿ ಹುಟ್ಟುಹಾಕಿದ ಭಯಾತಂಕಕ್ಕೆ ಶಾಲೆಯನ್ನೇ ಮುಚ್ಚಬೇಕಾಗಿ ಬಂತು. ಏಳು ದಿನ ಸತತವಾಗಿ ಮುಚ್ಚಿದ್ದ ಶಾಲೆಯ ಬಾಗಿಲು ಮತ್ತೆ ತೆರೆದದ್ದು ಶಾಲೆಯ ಆಡಳಿತ ಮಂಡಳಿ ಮೂಲಭೂತವಾದಿಗಳ ಬೆದರಿಕೆಗೆ ಬಗ್ಗಿ ನಬಿ ದಿವಸಾಚರಣೆಗೆ ಒಪ್ಪಿಕೊಂಡಾಗ ಮಾತ್ರ.

## ಮಮತಾ ಸರ್ಕಾರದ ತುಷ್ಟೀಕರಣ ನೀತಿ

ಇಷ್ಟಾಗಿಯೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಮಾಧ್ಯಮಗಳ ಮುಂದೆ ತಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಪ್ರತಿಕ್ರಿಯೆ ನೀಡುವಾಗ, "ಅಂತಹ ಯಾವ ಪ್ರಕರಣಗಳೂ ನಡೆದೇ ಇಲ್ಲ. ಇಲ್ಲದ್ದನ್ನು ಹುಟ್ಟುಹಾಕಿ ಪ್ರಚಾರ ಪಡೆಯುವ ಕೀಳುಮಟ್ಟಕ್ಕೆ ಇಳಿಯಲು ಮಾಧ್ಯಮಗಳಿಗೆ ನಾಚಿಕೆಯಾಗಬೇಕು" ಎಂದು ಅಪ್ಪಣೆ ಹೊರಡಿಸಿದರು. ವಾಸ್ತವದಲ್ಲಿ ಧುಲಾಗಢದ ಘಟನೆ ಮಮತಾ ಸರ್ಕಾರದ ನಿರ್ಲಜ್ಜ ಮುಸ್ಲಿಂ ತುಷ್ಟೀಕರಣ ನೀತಿಯ ಜೀವಂತ ಜ್ವಲಂತ ಉದಾಹರಣೆ. ಅಧಿಕಾರಕ್ಕೆ ಅಂಟಿಕೊಂಡಿರಲು ತೃಣಮೂಲ ಕಾಂಗ್ರೆಸ್ ಸರ್ಕಾರ ಕಂಡುಕೊಂಡಿರುವ ಸರಳಸೂತ್ರವೆಂದರೆ ಆ ರಾಜ್ಯದ 27% ದಷ್ಟಿರುವ ಮುಸ್ಲಿಮರ ತಾಳಕ್ಕೆ ತಕ್ಕ ಕುಣಿತವಾಡುವುದು. ವರದಿಗಳ ಪ್ರಕಾರ ಅಕ್ರಮ ಬಾಂಗ್ಲಾ ನುಸುಳುಕೋರರನ್ನೂ ಸೇರಿಸಿ ಪಶ್ಚಿಮ ಬಂಗಾಳದ ಮುಸ್ಲಿಂ ಜನಸಂಖ್ಯೆ ಈಗಾಗಲೇ 30% ಕ್ಕೇರಿದೆ. ಈ ಜನಸಂಖ್ಯೆಯನ್ನು ತನ್ನ ಕಾಯಂ ಮತಕೋಟೆಯಾಗಿ ಪರಿವರ್ತಿಸಲು ಮಮತಾರ ಸರ್ಕಾರ 2012 ರಲ್ಲೇ ರಾಜ್ಯದ 32,000 ದಷ್ಟು ಮದರಸಾದ ಇಮಾಂಗಳಿಗೆ ಪ್ರತಿ ತಿಂಗಳು 2,500 ರೂಪಾಯಿಗಳ ಮತ್ತು ಮೌಲ್ವಿಗಳಿಗೆ 1,000 ರೂಪಾಯಿಗಳ ಸಹಾಯಧನ ಘೋಷಿಸಿತ್ತು.

ಸಹಜವಾಗಿಯೇ ಇಂತಹ ಕ್ರಮಗಳು ರಾಜ್ಯದ ಹಿಂದೂ ಜನತೆಗೆ ಮಮತಾರ ನಿಯತ್ತಿನ ಕುರಿತಾಗಿ ಸಂಶಯದ ದೃಷ್ಟಿಯಿಂದ ನೋಡುವಂತೆ ಮಾಡಿದವು. ಇಷ್ಟಾಗಿಯೂ, ಕಳೆದ ನವೆಂಬರ್‌ನಲ್ಲಿ ರಾಜಧಾನಿ ಕೊಲ್ಕತ್ತಾದಲ್ಲಿ ಮೌಲ್ವಿ ಮತ್ತು ಇಮಾಂಗಳ ಸಹಾಯಧನವನ್ನು ಕ್ರಮವಾಗಿ 20,000 ಮತ್ತು 10,000 ರೂಪಾಯಿಗಳಿಗೇರಿಸುವಂತೆ ಇಸ್ಲಾಮೀ ಸಂಘಟನೆಗಳು ಮೋರ್ಚಾಗಳನ್ನು ನಡೆಸಿದವು.

1971 ರ ಬಾಂಗ್ಲಾದೇಶ ವಿಮೋಚನೆಯ ಹೋರಾಟದಲ್ಲಿ ಪಾಕಿಸ್ತಾನದ ಪರವಾಗಿದ್ದ ಯುದ್ಧಾಪರಾಧಿಗಳನ್ನು ಕಳೆದ ವರ್ಷ ಬಾಂಗ್ಲಾದೇಶದ ಸರ್ಕಾರ ನಿಸ್ಸಂಕೋಚವಾಗಿ ತನ್ನ ದೇಶದಲ್ಲಿ ಗಲ್ಲಿಗೇರಿಸಿತು. ದೇಶವಿರೋಧಿ ಕೃತ್ಯಗಳಿಗೆ ವಿದೇಶಿ ಸರ್ಕಾರವೊಂದು ತನ್ನಲ್ಲಿನ ಇಸ್ಲಾಮೀ ಉಗ್ರರನ್ನು ನೇಣಿಗೇರಿಸಿದರೆ ಪಶ್ಚಿಮಬಂಗಾಳದ ಇಸ್ಲಾಮೀ ಮತಾಂಧರು ಆ ಶಿಕ್ಷೆಯನ್ನು ವಿರೋಧಿಸಿ ಯಾವುದೇ ನಾಚಿಕೆ ಇಲ್ಲದೆ ಹಿಂದೆಂದೂ ಕಾಣದ ವಿರೋಧ, ಪ್ರದರ್ಶನಗಳನ್ನು ರಾಜ್ಯದುದ್ದಕ್ಕೂ ನಡೆಸಿದರು. ಮಮತಾರ ಸರ್ಕಾರ ಈ ಯಾವುದೇ ಘಟನೆಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳಲಿಲ್ಲ. ಕಳೆದ ವರ್ಷ ಬರ್ದ್ವಾನ್‌ನಲ್ಲಿ ಅಕಸ್ಮಾತ್ ಆಗಿ ಬಾಂಬ್ ಸ್ಫೋಟವೊಂದು ನಡೆದಾಗಲೇ ರಾಜ್ಯದ ಆಡಳಿತ ಪಕ್ಷ ಟಿ.ಎಂ.ಸಿ ಮತ್ತು ಉಗ್ರ ಸಂಘಟನೆಗಳ ಮಧ್ಯದ ಸಂಬಂಧಗಳು ಜಗಜ್ಜಾಹೀರಾಗಿತ್ತು. ಮೂಲಭೂತವಾದಿಗಳ ಮತ್ತು ರಾಜ್ಯ ಸರ್ಕಾರದ ಒಳ ಒಪ್ಪಂದಗಳ ಪರಿಣಾಮವಾಗಿ ನಿರ್ಬಂಧಿತ ಜಮಾತೆ ಇಸ್ಲಾಮಿ ಮತ್ತು ಜಮಾತ್–ಉಲ್–ಮುಜಾಹಿದ್ದೀನ್–ಬಾಂಗ್ಲಾದೇಶ್‌ನಂತಹ ಉಗ್ರರ ತಂಡದ ನೂರಾರು ನಾಯಕರು ಮತ್ತು ಅವರ ಬಂಟರಿಗೆ ಇಂದು ಪಶ್ಚಿಮಬಂಗಾಳ ಸುರಕ್ಷಿತ ಅಡಗುದಾಣವಾಗಿದೆ.

**ದೂರದ ಬಂಗಾಳದಲ್ಲಿರಲಿ, ಹತ್ತಿರದ ಕೇರಳದಲ್ಲಿರಲಿ ಇಸ್ಲಾಮೀ ಮೂಲಭೂತವಾದ ಇಂದು ತನ್ನೆಲ್ಲ ವಿಷದ ಬೇರುಗಳನ್ನು ಕ್ರಮೇಣ ಸಮಾಜದಲ್ಲಿ ಗಟ್ಟಿಯಾಗಿ ಹುದುಗಿಸಿಗೊಳ್ಳುತ್ತ ಸಾಗುತ್ತಿದೆ. ಸಾಗರದಾಚೆಯ ಫ್ರಾನ್ಸ್, ಜರ್ಮನಿ ದೇಶಗಳಲ್ಲಿ ಟ್ಯಾಂಕರ್, ಟ್ರಕ್‌ಗಳ ಮೂಲಕ ಮುಗ್ಧರ ಹತ್ಯೆಯಲ್ಲಿ ಸಂತೋಷ ಕಾಣುವವರಲ್ಲಿ, ನಮ್ಮದೇ ರಾಜ್ಯದ ಗದಗ ಕೊಪ್ಪಳಗಳಲ್ಲಿ ಕೆಲದಿನಗಳ ಹಿಂದೆಯೇ ಹನುಮಜಯಂತಿಯಂದು ಕಾಲ್ಕೆರೆದು ಹಿಂದುಗಳೊಡನೆ ಜಗಳಕ್ಕೆ ನಿಲ್ಲುವವರಲ್ಲಿ, ಮೂಡಬಿದರೆಯ ಪ್ರಶಾಂತ್ ಪೂಜಾರಿ, ಮಡಿಕೇರಿಯ ಕುಟ್ಟಪ್ಪನವರನ್ನು ನಿರ್ದಯವಾಗಿ ಕೊಲ್ಲುವವರಲ್ಲಿ ಮನೆಮಾಡಿರುವ ಹಿಂದುವಿರೋಧಿ ಜಿಹಾದಿ ಮಾನಸಿಕತೆ ಒಂದೇ ಎನ್ನುವುದು ಕಟು ಸತ್ಯ. ಇದರ ಅರಿವಾದಂದೇ ಇಸ್ಲಾಮಿ ಭಯೋತ್ಪಾದನೆ ಎಂಬ ಜಾಗತಿಕ ಪಿಡುಗಿನ ವಿರುದ್ಧ ಸನ್ನದ್ಧರಾಗುವತ್ತ ನಾವು ಮೊದಲ ಹೆಜ್ಜೆ ಇಡುವುದು.**



*2ನೇ ಪುಟಕ್ಕೆ*

**ಹೆಸರು:** ನಾಗೋರಿ

**ಮೂಲ:** ರಾಜಾಸ್ಥಾನದ ನಾಗೌರ್

**ರೂಪ:** ಸಾಮಾನ್ಯವಾಗಿ ಬಿಳಿ/ಬೂದಿ ಬಣ್ಣ

**ವಿಶೇಷತೆ:** ರಾಜ್ಯದ ಕಟು ವಾತಾವರಣದಲ್ಲೂ ಹೊಂದಿಕೊಂಡಿದೆ. ಕುದುರೆಯ ಮುಖವನ್ನೇ ಹೋಲುವ ಉದ್ದ ಮುಖ, ಲಗುಬಗೆಯ ಚಟುವಟಿಕೆಯನ್ನು ಹೊಂದಿದೆ.

**ಹಾಲಿನ ಪ್ರಮಾಣ:** ಒಂದು ಕರಾವಿನಲ್ಲಿ ಸರಾಸರಿ 600 ಕೆಜಿ



*1ನೇ ಪುಟದಿಂದ...*

## ದುರ್ಗಾಪೂಜೆಗೆ ನಿರ್ಬಂಧ

ತನ್ನ ಐತಿಹಾಸಿಕ ದುರ್ಗಾಪೂಜೆಗೆ ಹೆಸರಾಗಿದ್ದ ಪಶ್ಚಿಮ ಬಂಗಾಳದಲ್ಲಿಂದು ದುರ್ಗಾಪೂಜೆಯ ಪೆಂಡಾಲ್‌ಗಳಿಗೆ ನಿರ್ಬಂಧ ಹೇರಲಾಗುತ್ತಿದೆ ಎಂದರೆ ನಂಬಲೇಬೇಕು. ಬೀರ್ ಭೂಂ ಜಿಲ್ಲೆಯ ಹಳ್ಳಿಯೊಂದರಲ್ಲಿರುವ 300 ಹಿಂದು ಕುಟುಂಬಗಳಿಗೆ ಕಳೆದ 4 ವರ್ಷಗಳಿಂದ ಸತತವಾಗಿ ದುರ್ಗಾಪೂಜೆಗೆ ಅವಕಾಶವೇ ಕೊಟ್ಟಿಲ್ಲ. ಕಾರಣ, ಊರಲ್ಲಿರುವ 25 ಮುಸ್ಲಿಂ ಕುಟುಂಬಗಳಿಗೆ ಇಂತಹ ಪೂಜೆಯಿಂದ ತೊಂದರೆಯಾಗುತ್ತಿದೆ ಎಂಬುದು. ಕಳೆದ ಅಕ್ಟೋಬರ್ ತಿಂಗಳ ದುರ್ಗಾಪೂಜೆಯ ಸಂದರ್ಭದಲ್ಲಿ ರಾಜ್ಯಾದ್ಯಂತ 12 ಸ್ಥಳಗಳಲ್ಲಿ ಸಾಂಪ್ರದಾಯಿಕ ದಂಗೆಗಳು ನಡೆದವು. ದಂಗೆಗಳ ಮೂಲಕಾರಣ, ವಿಜಯದಶಮಿಯ ದಿನದಂದು ದುರ್ಗಾಮೂರ್ತಿಗಳ ವಿಸರ್ಜನೆಯಿಂದ ಮುಸ್ಲಿಮರ ಮೊಹರ್ರಂ ಆಚರಣೆಗೆ ತೊಡಕಾಗುತ್ತದೆ ಎಂಬ ರಾಜ್ಯಸರ್ಕಾರದ ಧೋರಣೆ. ಹೀಗಾಗಿ ಸಾಯಂಕಾಲ 4 ರ ನಂತರ ದುರ್ಗಾಮೂರ್ತಿಗಳ ವಿಸರ್ಜನೆಗೆ ನಿಷೇಧ ಹೇರಲಾಯಿತು. ಕೊಲ್ಕತ್ತಾ ಹೈಕೋರ್ಟ್, ಕೇವಲ ಹಿಂದುಗಳ ಆಚರಣೆಗಳ ಮೇಲೆಯೇ ವಿಧಿಸಿದ ನಿರ್ಬಂಧಗಳ ಕುರಿತಾಗಿ ತನ್ನ ತೀರ್ಪಿನಲ್ಲಿ ರಾಜ್ಯಸರ್ಕಾರಕ್ಕೆ ಛೀಮಾರಿ ಹಾಕಿ ಮತೀಯ ವಿಭಜನೆಯ ರಾಜಕೀಯ ಅತ್ಯಂತ ಘಾತುಕ ಎಂದೂ ಅಭಿಪ್ರಾಯಪಟ್ಟಿತು. ಕೋರ್ಟಿನ ತೀರ್ಪು ಬರುವುದು ತೀರಾ ತಡವಾಗಿದ್ದರಿಂದ, ಅಷ್ಟರಲ್ಲಿ ನಡೆಯಬಾರದ್ದು ನಡೆದೇ ಹೋಗಿತ್ತು. ಮೊಹರ್ರಂ ಮೆರವಣಿಗೆಯಲ್ಲಿ ಪಾಲ್ಗೊಂಡವರು ಅನೇಕ ದುರ್ಗಾ ಪೆಂಡಾಲ್ ಮತ್ತು ದೇವಿಯ ವಿಸರ್ಜನೆಯ ಸ್ಥಳಗಳನ್ನು ತಮ್ಮ ಪುಂಡಾಟಿಕೆಗೆ ಗುರಿಯಾಗಿಸಿದರು.

ಇಂತಹ ಘಟನೆಗಳ ವ್ಯತಿರಿಕ್ತ ಪರಿಣಾಮವಾಗಿ ಬಂಗಾಳದಲ್ಲಿ ಹಿಂದೂ-ಮುಸ್ಲಿಮರ ಮಧ್ಯದ ಕಂದಕ ಹಿಂದೆಂದಿಗಿಂತ ಇಂದು ಹೆಚ್ಚು ದೊಡ್ಡದಾಗಿದೆ. ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿದ್ದರೂ ನಮ್ಮ ಮಾಧ್ಯಮದ ಒಂದು ಗುಂಪಿಗೆ ಇನ್ನೂ ಜ್ಞಾನೋದಯವಾದಂತಿಲ್ಲ. ಅದಕ್ಕೆ ಹಿಂದೂಗಳ ಪ್ರಾಣಕ್ಕಿಂತ, ಸಮಾಜದ ಸುರಕ್ಷೆ ಮತ್ತು ದೇಶದ ಹಿತಕ್ಕಿಂತ 'ಮುಸ್ಲಿಮರು ಚಿಲ್ಲರೆ ವಿಷಯಗಳಿಗೆ ಅನಗತ್ಯವಾಗಿ ತೊಂದರೆಗೊಳಪಡುವುದು' ಬೇಕಿಲ್ಲ. ಈ ಮಾಧ್ಯಮ ಮಂದಿಯ ಸಹಿಷ್ಣುತೆಯ ಭಾಷಣಗಳು ಮತ್ತು ತಥಾಕಥಿತ ಬುದ್ಧಿಜೀವಿ ವರ್ಗದ ಸಹಬಾಳ್ವೆಯ ಪ್ರಬೋಧನೆಗಳು ಹಿಂದುಗಳಿಗೆ ಮಾತ್ರ ಸೀಮಿತವಾಗಿದೆ. ಇಷ್ಟು ಸಾಲದೆಂಬಂತೆ, ಈ ಘಟನೆಗಳ ವರದಿ ಮಾಡಿದ ಝೀ ನ್ಯೂಸ್ ಚಾನೆಲ್‌ನ ಮೇಲೆ ಪಶ್ಚಿಮ ಬಂಗಾಳದ ಸರ್ಕಾರ ಮೊಕದ್ದಮೆಯನ್ನೂ ಕೂಡ ದಾಖಲಿಸಿದೆ.

ನೆಲದ ಮಾತು

# ಯಶಸ್ಸು ಕಾಣುತ್ತಿರುವ ದೇಸೀ ಗೋ ಉದ್ಯಮ

ಗೋಮಾತೆಯಲ್ಲಿ ಮುವತ್ತಮೂರು ಕೋಟಿ ದೇವತೆಗಳಿದ್ದಾರೆ ಎಂಬುದು ಭಾರತೀಯರ ನಂಬಿಕೆ. ಆದ್ದರಿಂದಲೇ ಗೋವಿಗೆ ಅಷ್ಟೊಂದು ಮಹತ್ತ್ವ. ಗಿರ್ ಆಕಳಿನ ಗಂಜಲದಲ್ಲಿ ಚಿನ್ನದ ಅಂಶವಿರುವುದನ್ನು ಇತ್ತೀಚೆಗೆ ಪತ್ತೆ ಹಚ್ಚಲಾಗಿದೆ. ಅದಲ್ಲದೇ, ಗೋವಿನ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಮಾರಾಟ ಮಾಡುವುದರಿಂದಲೂ ಹಣ ಗಳಿಸಬಹುದು. ಇತ್ತೀಚೆಗೆ ಗೋ ಉತ್ಪನ್ನಗಳು ಹೆಚ್ಚು ಜನಪ್ರಿಯವಾಗುತ್ತಿರುವುದರಿಂದ ದೇಸೀ ಹಸು ಸಾಕುವವರಿಗೆ ಇದೂ ಒಂದು ಆದಾಯದ ಮೂಲವಾಗಬಹುದು.

ದೇಸೀ ತಳಿ ಹಸುಗಳು ಹೆಚ್ಚು ಹಾಲು ಕೊಡುವುದಿಲ್ಲ, ಹೆಚ್ಚು ತಂಟೆ ಮಾಡುತ್ತವೆ ಎಂಬ ಕಾರಣಕ್ಕೆ ಕೃಷಿಕರ ಮನೆಗಳಲ್ಲಿ ವಿದೇಶೀ ತಳಿಯ ಹಸುಗಳೇ ಹೆಚ್ಚು. ಆದರೆ, ದೇಸೀ ಹಸುಗಳ ಹಾಲು ಮಾತ್ರವಲ್ಲ, ಸಗಣಿ, ಗಂಜಲಗಳೂ ಬೆಲೆಬಾಳುತ್ತವೆ. ಆ ಕಾರಣಕ್ಕೆ ಕ್ರಮೇಣ ವಿದೇಶೀ ತಳಿ ಬಿಟ್ಟು ದೇಸೀ ಹಸು ಸಾಕುವುದು ಈಗ ಹೊಸ ಟ್ರೆಂಡ್ ಆಗುತ್ತಿದೆ.

ರಾಮಚಂದ್ರಪುರದ ಮಠದ ಶ್ರೀಗಳ ಮಾರ್ಗದರ್ಶನದಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಗಂಗಾಪುರ ಗ್ರಾಮದಲ್ಲಿ ಮಾ ಗೋ ಪ್ರೊಡಕ್ಟ್ ಪ್ರೈ. ಲಿ., ಎಂಬ ಸಂಸ್ಥೆ ದೊಡ್ಡ ಪ್ರಮಾಣದಲ್ಲಿ ಗವ್ಯ ಉತ್ಪನ್ನಗಳನ್ನು ಸಿದ್ಧ ಮಾಡಿ ಮಾರುಕಟ್ಟೆಗೆ ಬಿಡುತ್ತಿದೆ. ಗೋ ತೀರ್ಥ ಅರ್ಕ, ನಿರ್ಮಲ ಗಂಗಾ ಎಂಬ ಸೋಪು, ಅಗರಬತ್ತಿ ಸೇರಿ 40 ಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುತ್ತಿದೆ. ಹೆಚ್ಚು ಹಾಲು ಕೊಡುವ ದೇಸೀ ತಳಿಗಳಾದ ಸಾಹೀವಾಲ್ ಮೊದಾಲಾದ ಹಸುಗಳನ್ನು ಸಾಕಿಕೊಂಡರೆ ಹಾಲು ಮತ್ತು ಗವ್ಯ ಉತ್ಪನ್ನಗಳೆರಡನ್ನೂ ಮಾಡುವುದರಿಂದ ಆರ್ಥಿಕವಾಗಿ ಹೊರೆ ಎನಿಸುವುದಿಲ್ಲ ಎನ್ನುತ್ತಾರೆ ಮಾ ಗೋ ಪ್ರೊಡಕ್ಟ್‌ನ ಶಿವಕುಮಾರ್.

### ಮಲೆನಾಡು ಗಿಡ್ಡ ತಳಿಯ ಅರ್ಕ

ತೀರ್ಥಹಳ್ಳಿಯ ಮಜ್ಜಿಗೆ ಹೊಳೆ ಸಮೀಪದ ಶಂಕರನಾರಾಯಣ ಭಟ್ಟ (94495 62690) ಕಳೆದ ಕೆಲವು ವರ್ಷಗಳಿಂದ ಮಲೆನಾಡು ಗಿಡ್ಡ ತಳಿಯ ಹಸುಗಳನ್ನು ಸಾಕಿ, ಅವುಗಳ ಮೂತ್ರದಿಂದ ಅರ್ಕ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. 10 ಎಕರೆಯಷ್ಟು ಭೂಮಿ ಹೊಂದಿರುವ ಇವರು ಅದರಲ್ಲಿ ಜೆಟ್ ಹಾಕಿ ಹುಲ್ಲು ಬೆಳೆಸಿದ್ದಾರೆ. 50 ಕ್ಕೂ ಹೆಚ್ಚು ಆಕಳನ್ನು ಸಾಕಿರುವ ಇವರು ಅವುಗಳನ್ನು ಕಟ್ಟಿ ಸಾಕದೇ, ಮೇಯಲು ಬಿಡುತ್ತಾರೆ. ಅವುಗಳಿಂದ ಸಂಗ್ರಹಿಸಿದ ಮೂತ್ರದಿಂದ ಅರ್ಕ ಮತ್ತು ಫಿನಾಯಿಲ್ ತಯಾರಿಸುತ್ತಿದ್ದಾರೆ. ಗೋತೀರ್ಥ ಸಾರ ಎಂಬ ಅವರ ಉತ್ಪನ್ನ ಹೈದರಾಬಾದ್, ಜಾರ್ಖಂಡ್‌ವರೆಗೂ ಪ್ರಸಿದ್ಧವಾಗಿದೆ. ಕಫ, ಕೆಮ್ಮು ಕ್ಯಾನ್ಸರ್‌ಗೂ ಗೋ ಅರ್ಕ ಬಳಸಿ ಯಶಸ್ವಿಯಾದವರಿದ್ದಾರೆ ಎನ್ನುತ್ತಾರೆ ಅವರು. 16 ಲೀಟರಿನಷ್ಟು ಗೋಮೂತ್ರಕ್ಕೆ ಅಮೃತಬಳ್ಳಿ, ತುಳಸಿ ಸೇರಿಸಿ 24 ಗಂಟೆಗಳ ಕಾಲ ಒಂದೇ ಹದದಲ್ಲಿ ಕುದಿಸಿ ಆರಿಸಿ ಅರ್ಕ ಮಾಡುತ್ತೇವೆ. ಯಾವುದೇ ಹಂತದಲ್ಲಿ ತಪ್ಪಾದರೂ ಉತ್ಪನ್ನ ಕಳಪೆಯಾಗುತ್ತದೆ ಎನ್ನುತ್ತಾರೆ ಅವರು. ಮಲೆನಾಡು ಗಿಡ್ಡ ತಳಿಯ ಪ್ರಚಾರದಲ್ಲಿ ತೊಡಗಿರುವ ಅವರು, ಅದರ ಕುರಿತು ಯಕ್ಷಗಾನ ಮಾಡಿಸಿದ್ದಾರೆ. ಕರಪತ್ರ ಮಾಡಿ ಹಂಚುತ್ತಿದ್ದಾರೆ. ಗೋ ಅರ್ಕ ಮಾಡುವವರಿಗೆ ಉಚಿತ ತರಬೇತಿ ಕೊಡುತ್ತಿದ್ದಾರೆ ಕೂಡ. ಹೆಚ್ಚು ಜನರು ಗೋ ಉತ್ಪನ್ನ ತಯಾರಿಸಲು ಮುಂದೆ ಬಂದಲ್ಲಿ ಅವರಿಗೆ ಎಲ್ಲ ಸಹಕಾರ ಕೊಡಲು ಸಿದ್ಧ ಎನ್ನುವ ಕಳಕಳಿ ಅವರದ್ದು.



**ಸರ್ಕಾರದಿಂದ ಸಹಾಯ:** ಗವ್ಯ ಉತ್ಪನ್ನ ಮಾಡುವವರಿಗೆಂದು ಯಾವುದೇ ಪ್ರತ್ಯೇಕ ಸಹಾಯಧನವಿಲ್ಲ. ಆದರೆ, ಕೈಗಾರಿಕಾ ಇಲಾಖೆಯಿಂದ ಉದ್ಯಮ ಪ್ರಾರಂಭಿಸುವವರಿಗೆ ಕೆಲವು ಸಬ್ಸಿಡಿ ಯೋಜನೆಗಳಿವೆ. ಪಶುಸಂಗೋಪನಾ ಇಲಾಖೆಯಿಂದ ಗೋಶಾಲೆ ನಡೆಸುವ ಟ್ರಸ್ಟ್‌ಗಳಿಗೆ ಅನುದಾನ ನೀಡಲಾಗುತ್ತದೆ. ಒಂದು ಹಸು ನಿರ್ವಹಣೆಗೆ ಪ್ರತಿದಿನಕ್ಕೆ 17.5 ರೂ ನೀಡಲಾಗುತ್ತದೆ. ಸಹಾಯ, ಸಹಕಾರಗಳಿವೆ, ಆದರೆ ದೇಸೀ ತಳಿ ಸಂರಕ್ಷಣೆಗೆ ಇಚ್ಛಾಶಕ್ತಿ ಹೊಂದಿರುವವರು ಬೇಕಾಗಿದ್ದಾರೆ ಅಷ್ಟೇ.

# ಸುಭಾಷ್ ಚಂದ್ರ ಬೋಸ್

ಜನ್ಮಜಾತ ಮೇಧಾವಿ, ಪ್ರಖರ ರಾಷ್ಟ್ರಭಕ್ತ, ನಿಸ್ವಾರ್ಥ ಮತ್ತು ನಿರ್ಭೀತ ನೇತಾರ, ಅಸ್ಖಲಿತ ವಾಗ್ಮಿ, ಧುರಂಧರ ಬರಹಗಾರ ಹೀಗೆ ಸುಭಾಷ್ ಚಂದ್ರರ ವ್ಯಕ್ತಿತ್ವಕ್ಕೆ ಅವರೇ ಸಾಟಿ.

ವಿದ್ಯಾರ್ಥಿದೆಸೆಯಲ್ಲೇ ನಾಯಕತ್ವದ ಗುಣಗಳನ್ನು ಬೆಳಸಿಕೊಂಡಿದ್ದ ಅವರಿಗೆ ಮುಂದೆ ಸಹಜವಾಗಿಯೇ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವ ಅರಸಿಕೊಂಡು ಬಂದಿತ್ತು. ರಾಷ್ಟ್ರನಿರ್ಮಾಣದ ಜವಾಬ್ದಾರಿಯುತ ಸ್ಥಾನದಲ್ಲಿದ್ದು ರಾಷ್ಟ್ರಹಿತಕ್ಕೆ ಧಕ್ಕೆಯಾಗುವ ವಿಷಯಗಳಲ್ಲಿ ದುರ್ಬಲನೀತಿ ಹೊಂದಿರಬಾರದೆಂಬುದು ಸುಭಾಷ್‌ರ ದಿಟ್ಟ ನಿಲುವು. ಕಷ್ಟಪಟ್ಟು ಗಳಿಸಿದ್ದ ಐ.ಸಿ.ಎಸ್. ಪದವಿಯನ್ನೇ ತಿರಸ್ಕರಿಸಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಬೋಸ್‌ರಿಗಿದ್ದ ರಾಜಕೀಯ ಚಿಂತನಾವೈಶಾಲ್ಯತೆಗೆ ಸರಿಸಮ ನಾಯಕ ಆ ಕಾಲಮಾನಕ್ಕೆ ಇದ್ದವರು ತೀರಾ ವಿರಳ.




1938ರ ಫೆಬ್ರವರಿ 19ರಂದು, ಹರಿಪುರದಲ್ಲಿ ಮಾಡಿದ ಕಾಂಗ್ರೆಸ್‌ನ ಅಖಿಲ ಭಾರತ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ಬ್ರಿಟಿಷರ ಒಡೆದು ಆಳುವ ನೀತಿಯ ಮತ್ತು ಮುಸ್ಲಿಂಲೀಗ್‌ನ ದೇಶವಿಭಜನೆಯ ಕುತಂತ್ರವನ್ನು ಮೊದಲಬಾರಿಗೆ ಬಹಿರಂಗವಾಗಿ ಬಿಚ್ಚಿಟ್ಟ ಅವರ ಬಿಡುಬೀಸು ಭಾಷಣಕ್ಕೆ ನೆರೆದವರ ಮೈ ರೋಮಾಂಚಿತವಾಗಿತ್ತು. ಕಾಂಗ್ರೆಸ್ ಕಾರ್ಯಕಾರಿಣಿಯ ಸದಸ್ಯರ ನೇಮಕಾತಿ ವಿಷಯದಲ್ಲಿ ನಡೆದ ರಾಜಕೀಯದಿಂದಾಗಿ ಮನ ನೊಂದ ಸುಭಾಷರು ಕಾಂಗ್ರೆಸ್ ತೊರೆದು 'ಫಾರ್ವರ್ಡ್ ಬ್ಲಾಕ್' ಸ್ಥಾಪಿಸಿದರು.

1938ರಲ್ಲಿ ಆರೆಸ್ಸೆಸ್‌ನ 'ಸಂಘ ಶಿಕ್ಷಾವರ್ಗ' ಶಿಬಿರಕ್ಕೆ ಭೇಟಿನೀಡಿದ್ದ ಸುಭಾಷರು ಸಂಘದ ಧ್ಯೇಯ ಮತ್ತು ಕಾರ್ಯ ಪದ್ಧತಿಯನ್ನು ಮನ:ಪೂರ್ವಕ ಶ್ಲಾಘಿಸಿದ್ದರು.

1940, ಜೂನ್ 18ರಂದು ಸಂಘಸ್ಥಾಪಕ ಡಾ॥ ಹೆಡಗೇವಾರ್‌ರ ಜತೆ ಸುಭಾಷರ ಭೇಟಿ ನಿಗದಿಯಾಗಿತ್ತು. ತೀವ್ರ ಜ್ವರದಿಂದ ಹಾಸಿಗೆ ಹಿಡಿದಿದ್ದ ಡಾ॥ ಹೆಡಗೇವಾರ್ ದೇಹಸ್ಥಿತಿಯಿಂದಾಗಿ ಇಬ್ಬರ ಭೇಟಿ ಸಾಧ್ಯವಾಗಲಿಲ್ಲ.

ವೀರ ಸಾವರ್ಕರ್‌ರಿಂದ ತಮ್ಮ ಹೋರಾಟದ ನಿಶ್ಚಿತ ಗುರಿಯನ್ನು ಕಂಡುಕೊಂಡ ನೇತಾಜಿ 19 ಜನವರಿ 1941ರ ಮಧ್ಯರಾತ್ರಿಯಲ್ಲಿ ದೇಶಬಿಟ್ಟು ಇತಿಹಾಸ ಕಂಡುಕೇಳರಿಯದ ಸಾಹಸಕ್ಕೆ ಮೊದಲಾದರು.

ಜರ್ಮನ್ ಸೇನಾಕೇಂದ್ರಗಳಲ್ಲಿದ್ದ ಭಾರತೀಯ ಸೈನಿಕರ ತರಬೇತಿ, ಬರ್ಲಿನ್ ರೇಡಿಯೋದಲ್ಲಿ ಭಾರತೀಯರ ಕುರಿತು ಭಾಷಣ, ಹಿಟ್ಲರ್ ಜತೆಗಿನ ಭೇಟಿ ಇದು ಜರ್ಮನಿಯಲ್ಲಿ ನೇತಾಜಿಯವರ ವಾಸ್ತವ್ಯದ ವಿವರ.

ಜಪಾನ್ ನಲ್ಲಿ 1943ರ ಅಕ್ಟೋಬರ್ 23ರಂದು ಸ್ವತಂತ್ರ ಭಾರತದ 'ಹಂಗಾಮಿ ಸರ್ಕಾರ'ದ ಸ್ಥಾಪನೆ. ಅದರ 'ಮೊದಲ ಪ್ರಧಾನ ಮಂತ್ರಿ'ಯಾಗಿ ಘೋಷಣೆ, ಆ ಸರ್ಕಾರಕ್ಕೆ ಅಗತ್ಯವಾಗಿದ್ದ ಆಡಳಿತ ವ್ಯವಸ್ಥೆ, ಅತಿ ಕಡಿಮೆ ಸಮಯದಲ್ಲೇ ನಾಣ್ಯ ವ್ಯವಸ್ಥೆ ಮತ್ತು ಸಂವಿಧಾನವನ್ನೂ ಜಾರಿಗೊಳಿಸಿದ್ದು ನೇತಾಜಿಯವರ ಆಡಳಿತ ಕೌಶಲ್ಯಕ್ಕೆ ಉದಾಹರಣೆ. ಜರ್ಮನಿ, ಜಪಾನ್, ಚೀನಾ, ಸಿಂಗಾಪುರ ಸೇರಿದಂತೆ ಹಲವಾರು ರಾಷ್ಟ್ರಗಳು ನೇತಾಜಿಯವರ ಸರ್ಕಾರಕ್ಕೆ ಮಾನ್ಯತೆ ನೀಡಿದ್ದು, ಅಲ್ಲಿಂದ ಪೂರ್ವಾಂಚಲ ಭಾರತದ ಗಡಿಗಳಲ್ಲಿ ಸೈನ್ಯ ಸಜ್ಜು ಮಾಡಿ 'ಅಂಡಮಾನ್ ಹಾಗೂ ನಿಕೋಬಾರ್' ದ್ವೀಪಗಳನ್ನು ವಶಪಡಿಸಿಕೊಂಡಿದ್ದು, ಇಂಫಾಲ್ ಹಾಗೂ ಕೊಹಿಮಾ ಕೂಡ ಐ.ಎನ್.ಎ ಕೈವಶವಾಗಿ ಸ್ವತಂತ್ರ ಭಾರತದ ಮಣ್ಣಿನ ಮೇಲೆ ಕಾಲಿಟ್ಟ ಐ.ಎನ್.ಎ ಸೈನಿಕರ ಸಾಹಸ ನಿಜವಾಗಿಯೂ ನೇತಾಜಿಯವರ ಅಸಾಧ್ಯ ಕಾರ್ಯಸಾಧಕ ಪ್ರವೃತ್ತಿಯ ಕಿರುಪರಿಚಯಗಳು.

**ಸಂಪಾದಕೀಯ ಸಹಕಾರ** ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ಬೀದರ್‌ನ ಶಿವನಗರದ ನಿವಾಸಿಯಾದ 15 ವರ್ಷದ ಮಲ್ಲಿಕಾರ್ಜುನ ಸ್ವಾಮಿ ಪಾಲಕರು ಕೊಟ್ಟ ಪುಡಿಗಾಸನ್ನು ಖರ್ಚು ಮಾಡದೇ ಸಂಗ್ರಹಿಸಿಟ್ಟಿದ್ದ. ಕಳೆದ ಮೂರು ವರ್ಷಗಳಿಂದ ಈತ ಹಣ ಸಂಗ್ರಹಿಸಿ ಈಗ ಸ್ವಚ್ಛ ಭಾರತ್ ಅಭಿಯಾನಕ್ಕೆ ಸಾಥ್ ನೀಡುವ ಮೂಲಕ ದೇಶದ ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾನೆ. ಮಲ್ಲಿಕಾರ್ಜುನ್ ತನ್ನ ಪೋಷಕರು ಹಾಗೂ ಸಂಬಂಧಿಕರು ಕೊಟ್ಟ 11,880 ರೂಪಾಯಿಗಳ ಜೊತೆ ಪೋಷಕರಿಂದ 3 ಸಾವಿರ ರೂಪಾಯಿ ಪಡೆದು ಒಟ್ಟು 15 ಸಾವಿರ ರೂಪಾಯಿ ಸಂಗ್ರಹಿಸಿದ್ದಾನೆ. ಈ ಹಣವನ್ನು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ ಪರಿಹಾರ ನಿಧಿಗೆ ಕಳಿಸಿದ್ದಾನೆ. ಇದೇ ಹಣದಿಂದ ಒಂದು ಶೌಚಾಲಯ ಕಟ್ಟಬೇಕು ಅನ್ನೋದು ಮಲ್ಲಿಕಾರ್ಜುನ ಸ್ವಾಮಿಯ ಆಶಯ.

**ಅತಿಯಾದ ತೂಕ ಮತ್ತು ಬೊಜ್ಜಿನ ಕಾರಣದಿಂದಾಗಿ 50 ವರ್ಷಕ್ಕಿಂತ ಕೆಳಗಿನ ವಯಸ್ಕರಲ್ಲಿ ಹೃದಯ ಕಾಯಿಲೆ ಬರುವುದನ್ನು ಧಾನ್ಯಗಳ ಸೇವನೆಯಿಂದ ಕಡಿಮೆ ಮಾಡಬಹುದು ಎಂದು ಅಧ್ಯಯನವೊಂದು ತಿಳಿಸಿದೆ.ನ್ಯೂಟ್ರಿಷನ್ ಎಂಬ ವೃತ್ತ ಪತ್ರಿಕೆಯಲ್ಲಿ ಈ ಅಧ್ಯಯನದ ವರದಿ ಪ್ರಕಟಗೊಂಡಿದ್ದು, ಇಡಿ ಧಾನ್ಯಗಳ ಸೇವನೆ ರಕ್ತದೊತ್ತಡ ಕಡಿಮೆ ಮಾಡಿ ನಮ್ಮ ದೇಹಕ್ಕೆ ಪರಿಣಾಮಕಾರಿ ಪೌಷ್ಟಿಕಾಂಶ ಸಮತೋಲನ ನೀಡುವುದಲ್ಲದೆ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ ಮತ್ತು ಸಾವನ್ನು ನಿಯಂತ್ರಿಸುತ್ತದೆ. ಹೃದ್ರೋಗ ಮತ್ತು ಪಾರ್ಶ್ವವಾಯು ಸಾವಿಗೆ ಪ್ರಮುಖ ಕಾರಣವಾಗಿದೆ. ಇಡಿ ಧಾನ್ಯಗಳನ್ನು ನಿಯಮಿತವಾಗಿ ಸೇವಿಸುತ್ತಾ ಬಂದರೆ ಹೃದಯ ಕಾಯಿಲೆಯನ್ನು ಕಡಿಮೆ ಮಾಡುತ್ತದೆ ಎನ್ನುತ್ತದೆ ವರದಿ.**

ಪಾಕಿಸ್ತಾನಿ ಹಿಂದುಗಳು ಭಾರತೀಯ ಪೌರತ್ವವನ್ನು ಅಪೇಕ್ಷಿಸಿ ಸಲ್ಲಿಸುವ ನೋಂದಣಿ ವ್ಯವಸ್ಥೆಯ ಶುಲ್ಕವನ್ನು ಭಾರತ ಸರ್ಕಾರ 15000 ರೂಪಾಯಿಗಳಿಂದ 100 ರೂಪಾಯಿಗಳಿಗೆ ಇಳಿಸಿದೆ. ಭಾರತೀಯ ಪೌರತ್ವಕ್ಕೆ ಸಂಬಂಧಿಸಿದ ಹೊಸ ನಿಯಮಗಳು ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾದೇಶದ ಅಲ್ಪಸಂಖ್ಯಾತರಿಗೆ ಅನ್ವಯಿಸುತ್ತವೆ.

**ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಒಂದೇ ಉಡಾವಣೆಯಲ್ಲಿ ಒಟ್ಟೂ 103 ಉಪಗ್ರಹಗಳನ್ನು ಕಕ್ಷೆಯಲ್ಲಿ ಸೇರಿಸುವ ಮೂಲಕ ಇನ್ನೊಂದು ವಿಕ್ರಮ ಸಾಧಿಸಲು ಸಜ್ಜಾಗುತ್ತಿದೆ. ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಫೆಬ್ರುವರಿ ಮೊದಲ ವಾರ ಅಂತರಿಕ್ಷಕ್ಕೆ ನೆಗೆಯಲಿರುವ ನೌಕೆ ಪಿಎಸ್‌ಎಲ್‌ವಿ–ಸಿ37 100 ವಿದೇಶಿ ಮತ್ತು 3 ಸ್ವದೇಶಿ ನಿರ್ಮಿತ ಮೈಕ್ರೋ ಉಪಗ್ರಹಗಳು ಸೇರಿದಂತೆ 1350ಕಿಲೋಗ್ರಾಮ್ ಪೇಲೋಡ್‌ನ್ನು ಹೊತ್ತೊಯ್ಯಲಿದೆ. 2014ರಲ್ಲಿ ರಷ್ಯಾ 37 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿತ್ತು, ಅಮೇರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಒಂದು ಬಾರಿ 29 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿತ್ತು. ಕಳೆದ ವರ್ಷ ಇಸ್ರೋ ಒಂದೇ ಉಡಾವಣೆಯಲ್ಲಿ 20 ಉಪಗ್ರಹಗಳನ್ನು ಹಾರಿಸಿತ್ತು. ಇಸ್ರೋದ ಈ ಹೊಸ ಪ್ರಯತ್ನ ದೇಶದ ಬಾಹ್ಯಾಕಾಶ ಇತಿಹಾಸದಲ್ಲಿ ಮಹತ್ವದ ಹೆಜ್ಜೆಯಾಗಲಿದ್ದು ಉಪಗ್ರಹ ಉಡಾವಣೆಯ ಅಂತರರಾಷ್ಟ್ರೀಯ ಉದ್ಯಮದಲ್ಲಿ ಇಸ್ರೋವನ್ನು ಮುಂಚೂಣಿಯಲ್ಲಿ ನಿಲ್ಲಿಸಲಿದೆ.**

ಭಾರತೀಯ ಮೂಲದ ಐದು ಮಂದಿ ಈ ಬಾರಿಯ ಅಮೇರಿಕ ಸಂಸತ್ತಿಗೆ ಆಯ್ಕೆಯಾಗಿ ಶಪಥ ಸ್ವೀಕರಿಸಿದ್ದಾರೆ. ಕ್ಯಾಲಿಫೋರ್ನಿಯಾದಿಂದ ಸೆನೆಟ್ ಆಯ್ಕೆಯಾದ ಕಮಲಾ ಹ್ಯಾರಿಸ್, ಸತತ ಮೂರನೇ ಬಾರಿಗೆ ಆಯ್ಕೆಯಾದ ಅಮಿ ಬೇರಾ, ಸಿಲಿಕಾನ್ ವ್ಯಾಲಿಯಿಂದ ಆಯ್ಕೆಯಾದ ರೋ ಖನ್ನಾ, ಇಲ್ಲಿನ್ಯಾಸ್‌ನಿಂದ ಆಯ್ಕೆಯಾದ ರಾಜಾ ಕೃಷ್ಣಮೂರ್ತಿ ಹಾಗೂ ಅಮೇರಿಕ ಹೌಸ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಆಯ್ಕೆಯಾದ ಮೊದಲ ಭಾರತೀಯ ಮೂಲದ ಮಹಿಳೆ ಎಂಬ ಖ್ಯಾತಿಯ ಪ್ರಮೀಳಾ ಜಯಪಾಲ್ ಈ ಅಮೇರಿಕದ ಸಂಸತ್ ಸದಸ್ಯರಾಗಿದ್ದಾರೆ. ರಾಜಾ ಕೃಷ್ಣಮೂರ್ತಿ ಭಗವದ್ ಗೀತೆಯ ಮೇಲೆ ಶಪಥ ಸ್ವೀಕರಿಸಿದ್ದು ಸಂಸತ್ ಸದಸ್ಯೆ ತುಳಸಿ ಗಬ್ಬಾರ್ಡ ನಂತರ ಗೀತೆಯ ಮೇಲೆ ಶಪಥ ಸ್ವೀಕರಿಸಿದ ಎರಡನೆಯ ಸದಸ್ಯರಾಗಿದ್ದಾರೆ. ಅಮೇರಿಕದ ಜನಸಂಖ್ಯೆಯಲ್ಲಿ ಸುಮಾರು ಶೇಕಡ 1 ರಷ್ಟು ಭಾರತೀಯ ಮೂಲದ ಜನರು ಸೇರಿದ್ದಾರೆ.



**ದೇಶದಲ್ಲಿ ಒಂದು ಕಡೆ ಊಟವೇ ಇಲ್ಲದೆ ಬಳಲುವ ಜನರಿದ್ದಾರೆ. ಮತ್ತೊಂದೆಡೆ ಊಟವನ್ನು ಚೆಲ್ಲಿ ದರ್ಪ ತೋರುವವರೂ ಇದ್ದಾರೆ. ಪಶ್ಚಿಮ ಬಂಗಾಳದ ಕಾಲೇಜು ಪ್ರಾಧ್ಯಾಪಕರಾದ ಚಂದ್ರಶೇಖರ ಕುಂದು ಊಟವಿಲ್ಲದೇ ಪರದಾಡುವ ನಿರ್ಗತಿಕ ಮಕ್ಕಳಿಗೆ ಆಹಾರ ಒದಗಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ನಗರದ ಪ್ರತಿ ಕ್ಯಾಂಟೀನ್, ಹೋಟೆಲ್ ಗಳನ್ನು ಸಂಪರ್ಕಿಸಿ, ಯಾರೂ ಬಳಸಿರದ ಹೆಚ್ಚುವರಿ ಆಹಾರವನ್ನು ತಮ್ಮ ವಿದ್ಯಾರ್ಥಿಗಳ ಜೊತೆಗೂಡಿ ತಂದು ಮಕ್ಕಳಿಗೆ ವಿತರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಕೆಲಸವನ್ನು ವಾರದ ಐದು ದಿನಗಳಂದು ಮಾಡುತ್ತಾರೆ.**

## ಸಾಲುದ್ದದ ಸುದ್ದಿಗಳು



ಆಡಂಬರದ ಮದುವೆಗಳ ಸಂಖ್ಯೆ ಏರುತ್ತಿರುವುದರ ನಡುವೆ ಬೆಂಗಳೂರಿನ ದಂಪತಿಗಳು ವಿವಾಹ ಮಹೋತ್ಸವವನ್ನು ವಿನೂತನವಾಗಿ ಆಚರಿಸಿಕೊಂಡರು. ಪೂರ್ವ ನಿಗದಿತವಾದಂತೆ ತಮ್ಮ ಮದುವೆಗೆ ಬರುವಾಗ ಯಾವುದೇ ಉಡುಗೊರೆಯನ್ನು ತರಬೇಡಿರೆಂದು ತಮ್ಮ ಸ್ನೇಹಿತರಲ್ಲಿ ವಿನಂತಿಸಿಕೊಂಡಿದ್ದ ಸುರಭಿ, ಹೇಮಂತ್ ಜೋಡಿ, ಸ್ನೇಹಿತರು ಉಡುಗೊರೆಯ ಹಣವನ್ನು ಅನಾಥ ಮಕ್ಕಳ ಉಪಯೋಗಕ್ಕೆ ಬರುವಂತೆ ವಿನಿಯೋಗಿಸಬೇಕೆಂದು ಕೇಳಿಕೊಂಡಿದ್ದರು. ತಮಗೆ ಬಂದ ಅಭೂತಪೂರ್ವ ಪ್ರತಿಕ್ರಿಯೆಯನ್ನು ಗಮನಿಸಿ ಅನಾಥಾಲಯಗಳಿಗೆ ಬಟ್ಟೆ, ಆಟಿಕೆ, ಪುಸ್ತಕಗಳು, ಸಿಹಿಯನ್ನು ದಾನ ರೂಪದಲ್ಲಿ ನೀಡಿ ತಮ್ಮ ವಿವಾಹವನ್ನೂ ಅನಾಥ ಮಕ್ಕಳೊಂದಿಗೆ ಮಾಡಿಕೊಂಡು ಶ್ರೇಷ್ಠ ರೀತಿಯಲ್ಲಿ ಆಚರಿಸಿಕೊಂಡರು. ನೆಲೆ, ಸಮರ್ಥನಮ್ ಟ್ರಸ್ಟ್, ಯೂತ್ ಫಾರ್ ಸೇವಾ ಜೊತೆ ಕೈಜೋಡಿಸಿ ತಾವು ಹಾಗೂ ಸ್ನೇಹಿತರು ಅನಾಥ ಶಿಶುಗಳ ಜೊತೆ ಉತ್ತಮ ರೀತಿಯಲ್ಲಿ ಸಮಯ ಕಳೇಯುವ ಈ ಪ್ರಯತ್ನ ಅತ್ಯಂತ ಶ್ಲಾಘನೀಯ.

**ಶಿವತ್ರೈ ಇದು ಛತ್ತೀಸ್ಗಢದ ಬಿಸ್ಲಾಪುರ ಜಿಲ್ಲೆಯಲ್ಲಿರುವ ಒಂದು ಬುಡಕಟ್ಟು ಗ್ರಾಮ. ಸುತ್ತಲ್ಲೂ ದಟ್ಟ ಅಡವಿಯಿಂದ್ಲೇ ಆವರಿಸಿರುವ ಊರು ಇದು. ತನ್ನ ವಿಶೇಷ ಕೊಡುಗೆಯಿಂದಾಗಿ ಈ ಹಳ್ಳಿ ಇತ್ತೀಚೆಗೆ ಸುದ್ದಿಯಲ್ಲಿದೆ .ಶಿವತ್ರೈ ಗ್ರಾಮದಲ್ಲಿ ಮೂಲ ಸೌಕರ್ಯಗಳ ಕೊರತೆಯಿದೆ. ಆದರೂ 50ಕ್ಕೂ ಹೆಚ್ಚು ರಾಷ್ಟ್ರೀಯ ಬಿಲ್ಲುಗಾರರನ್ನು ದೇಶಕ್ಕೆ ನೀಡಿದ ಹೆಮ್ಮೆ ಈ ಗ್ರಾಮದ್ದು. ಎಷ್ಟೋ ದಶಕಗಳಿಂದ ಬಿಲ್ವಿದ್ಯೆ ಇವರ ಬದುಕಲ್ಲಿ ಹಾಸುಹೊಕ್ಕಾಗಿದೆ. ಸಾಂಪ್ರದಾಯಿಕ ಬಿಲ್ಲುಗಾರಿಕೆ ಸಮುದಾಯದಲ್ಲಿ ಚಿಕ್ಕ ವಯಸ್ಸಿನವರಿದ್ದಾಗಲೇ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಬಿಲ್ಲುವಿದ್ಯೆ ಕಲಿಸಲಾಗುತ್ತದೆ. ಅದರ ಫಲವಾಗಿ ಕಳೆದ ಕೆಲವು ವರ್ಷಗಳಿಂದ ಶಿವತ್ರೈ ಗ್ರಾಮ ಅನೇಕ ಪ್ರತಿಭಾವಂತ, ಚಾಂಪಿಯನ್ ಬಿಲ್ಲುಗಾರರಿಗೆ ಜನ್ಮ ನೀಡಿದೆ. ಬಿಲ್ಲುಗಾರರ ಪ್ರತಿಭೆಯನ್ನು ಪೋಷಿಸುವ ಕಾರ್ಯಕ್ಕೆ ಸರ್ಕಾರವೂ ಮುಂದಾಗಬೇಕಿದೆ.**

ಮುಂಬೈ ನಿವಾಸಿ ವರ್ಷಾ ವೇದ್ ವೃತ್ತಿಯಲ್ಲಿ ಅಕೌಂಟೆಂಟ್. 40ರ ಆಸುಪಾಸಿನಲ್ಲಿ ಅವರಿಗೆ ಕಣ್ಣಿಗೆ ಸಂಬಂಧಿತ ಚಿಕ್ಕ ಸೋಂಕು ಕಾಣಿಸಿಕೊಂಡಿತು. ಇನ್ನೇನು ಸಮಸ್ಯೆ ಬಗೆಹರಿಯಿತು ಎನ್ನುವಷ್ಟರಲ್ಲಿ ಸೋಂಕು ಮತ್ತೊಂದು ಕಣ್ಣಿಗೂ ಹರಡಿ 90% ದಷ್ಟು ದೃಷ್ಟಿಯೇ ಕಳೆದುಕೊಂಡರು. ಸೂಕ್ತ ದಾನಿಗಳು ಸಿಕ್ಕಲ್ಲಿ ಕಣ್ಣ ಕಸಿಯಿಂದ ಮಾತ್ರ ವರ್ಷಾರ ದೃಷ್ಟಿ ಮರಳಬಹುದು ಎಂದು ವೈದ್ಯರು ತಿಳಿಸಿದರು. ಸೂಕ್ತ ದಾನಿಗಾಗಿ ವರ್ಷಾ ಎರಡು ವರ್ಷಗಳ ಕಾಲ ಕಾಯುತ್ತಲೇ ಇದ್ದರು. ಕೊನೆಗೆ ದಾನಿಯೊಬ್ಬರು ದೊರೆತು ವರ್ಷಾರ ಕಣ್ಣುಗಳು 2 ವರ್ಷಗಳ ನಂತರ ಮತ್ತೆ ಮುಂಚಿನಂತೆ ಬೆಳಕು ಕಾಣುವಂತಾಯಿತು. ತಮಗೆ ದೊರೆತ ಈ ಅವಕಾಶವನ್ನು ವರ್ಷಾ ದೇವರು ಕೊಟ್ಟ ವರವೆಂದು ಭಾವಿಸಿ ಅಂದಿನಿಂದ ಕಣ್ಣುಗಳ ದಾನದ ಪ್ರಾಮುಖ್ಯತೆಯನ್ನು ಇತರರಿಗೆ ತಿಳಿಸಿ ಆರೋಗ್ಯಕರ ಕಣ್ಣನ್ನು ದಾನಮಾಡಲು ಪ್ರೋತ್ಸಾಹಿಸುತ್ತಾರೆ. ಅವರ ಪ್ರಯತ್ನದಿಂದ ಇಂದಿಗೆ 1000 ಜನ ನೇತ್ರದಾನ ಮಾಡುವಂತಾಗಿರುವದು ನಿಜಕ್ಕೂ ಕೌತುಕದ ವಿಷಯ.

## ಸೆಲೆಬ್ರಿಟಿಗಳಲ್ಲ
### ಸದ್ದಿಲ್ಲದ ಸಾಧಕರು

## ಅಂಧರಾಗಿದ್ದರೂ ಪರಿಸರ ಸಂರಕ್ಷಣೆಯಿಂದ ಮಾದರಿಯಾಗಿರುವ ತಿಪ್ಪಣ್ಣ



ತಿಪ್ಪಣ್ಣ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ವಣಗೇರಾ ಗ್ರಾಮದವರು. ಚಿಕ್ಕವರಿದ್ದಾಗಲೇ ದೃಷ್ಟಿ ಕಳೆದುಕೊಂಡಿದ್ದರು. ಮೂರು ವರ್ಷಗಳ ಹಿಂದೆ ಇವರ ಮದುವೆಯಾಗಿದೆ. ಮೂರು ವರ್ಷ ಕಳೆದರೂ ಮಕ್ಕಳಾಗಿಲ್ಲ ಎಂಬ ಕೊರಗಿನಿಂದ ಗಿಡ ಮರಗಳನ್ನೇ ಮಕ್ಕಳು ಎಂದುಕೊಂಡಿದ್ದಾರೆ. ಖಾಲಿ ಬಿದ್ದಿದ್ದ ಜಮೀನಿನಲ್ಲಿ ಸಸಿ ನೆಟ್ಟು, ಅವುಗಳನ್ನೇ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆ.ಅರಣ್ಯ ಇಲಾಖೆಯಿಂದ 100 ಕ್ಕೂ ಹೆಚ್ಚು ಸಸಿಗಳನ್ನು ಪಡೆದುಕೊಂಡು, ತಮ್ಮ 2 ಎಕರೆ ಜಮೀನಿನಲ್ಲಿ ನೆಟ್ಟು ಮಕ್ಕಳಂತೆ ಪೋಷಣೆ ಮಾಡುತ್ತಿದ್ದಾರೆ.



## ಉಡುಪಿಯಲ್ಲಿ ಸಂಸ್ಕೃತ ಭಾರತಿಯ ರಾಷ್ಟ್ರೀಯ ಅಧಿವೇಶನ

**ಸಂಸ್ಕೃತ ಭಾರತಿಯ 3 ದಿನಗಳ ರಾಷ್ಟ್ರೀಯ ಅಧಿವೇಶನ ಜನವರಿ 6, 7 ಮತ್ತು 8 ರಂದು ಉಡುಪಿಯಲ್ಲಿ ನಡೆಯಿತು. ಉಡುಪಿಯ ರಾಜಾಂಗಣದಲ್ಲಿ ನಡೆದ ಈ ಅಧಿವೇಶನವನ್ನು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಮತ್ತು ಲೋಕಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಉದ್ಘಾಟಿಸಿದರು.**

**ರಾಷ್ಟ್ರೀಯ ಪಾಂಡುಲಿಪಿ ಮಿಷನ್‌ನಿಂದ ಪ್ರಾಚೀನ ತಾಳೆಗರಿ ಗ್ರಂಥಗಳ ಪ್ರದರ್ಶನ, ಸಂಸ್ಕೃತದಲ್ಲಿರುವ ವಿಜ್ಞಾನ ಗ್ರಂಥಗಳಲ್ಲಿರುವ ವಿಷಯಗಳ ಮೇಲಿನ ಪ್ರದರ್ಶಿನಿ, ಸಂಸ್ಕೃತಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚೆ ಮತ್ತು ಉಪನ್ಯಾಸಗಳು ಮೂರು ದಿನದ ಈ ಅಧಿವೇಶನದಲ್ಲಿ ನಡೆದವು. ಸಂಜೆ ನಡೆದ ಸಂಸ್ಕೃತ ಯಕ್ಷಗಾನ, ನೃತ್ಯ ರೂಪಕಗಳು ವಿಶೇಷ ಆಕರ್ಷಣೆಗಳಾಗಿದ್ದವು.**

**ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಸುಮಿತ್ರಾ ಮಹಾಜನ್ ಅವರು ಸಂಸ್ಕೃತದ ಕಲಿಕೆಯಿಂದ ಭಾಷಾ ಶುದ್ಧಿಯಾಗುವುದಲ್ಲದೇ, ಮನಃಶಾಂತಿಯೂ ದೊರಕುತ್ತದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಸಂಸ್ಕೃತ ವಿಶ್ವದ ಎಲ್ಲ ಭಾಷೆಗಳ ತಾಯಿ. ನಾವೆಲ್ಲ ಸಂಸ್ಕೃತವನ್ನು ಕಲಿಯುವ ಮೂಲಕ ಅದನ್ನು ಬೆಳೆಸಬೇಕಾಗಿದೆ. ಸಂಸ್ಕೃತ ನಮ್ಮೆಲ್ಲರ ಮನೆಮಾತಾಗಬೇಕು ಎಂದು ಪೇಜಾವರ ಶ್ರೀಗಳು ಆಶಿಸಿದರು. ಈ ಅಧಿವೇಶನದಲ್ಲಿ ದೇಶದ ಎಲ್ಲಾ ರಾಜ್ಯಗಳಿಂದ ಬಂದಿದ್ದ ಸುಮಾರು 2,000 ಸಂಸ್ಕೃತಾಭಿಮಾನಿಗಳು ಭಾಗವಹಿಸಿದ್ದರು.**

**ಡಾ॥ ವಿಶಾಲ್ ರಾವ್ ಗಂಟಲು, ಕತ್ತು ಮತ್ತು ತಲೆಗೆ ಸಂಬಂಧಿಸಿದ ರೋಗಗಳ ತಜ್ಞರು. ಇತ್ತೀಚಿಗೆ ವಿಶಾಲ್ ರು ಸಂಶೋಧಿಸಿದ ಹೊಸ ಆವಿಷ್ಕಾರವೊಂದು ಗಂಟಲು ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ತಮ್ಮ ಧ್ವನಿಯನ್ನೇ ಕಳೆದುಕೊಂಡ ಅನೇಕ ರೋಗಿಗಳಿಗೆ ವರವಾಗಿ ಪರಿಣಮಿಸಿದೆ. AUM (ಓಂ) ಹೆಸರಿನ ಈ ಚಿಕ್ಕ ಯಂತ್ರದ ಅಳವಡಿಕೆಯಿಂದ ಗಂಟಲು ಕ್ಯಾನ್ಸರ್ ರೋಗಿಗಳ ಧ್ವನಿ ಮತ್ತೆ ಮರಳಿ ಅವರ ಜೀವನಕ್ಕೆ ಹೊಸ ಹುರುಪು ತುಂಬುತ್ತಿದೆ. ಡಾ॥ ವಿಶಾಲ್ ರ ಸಂಶೋಧನೆಯ ಹೆಗ್ಗಳಿಕೆಯೆಂದರೆ ಈ ಯಂತ್ರಕ್ಕೆ ಅವರು ಪಡೆಯುವ ಶುಲ್ಕ ಕೇವಲ 50 ರೂಪಾಯಿ. ತಮ್ಮ ಜೀವಮಾನದಲ್ಲಿ ಮತ್ತೆ ಮಾತಾಡುವ ಭಾಗ್ಯ ಸಿಗುವುದಿಲ್ಲ ಎಂದು ಹತಾಶರಾದ ಅನೇಕ ಜೀವಗಳಿಗೆ ಇಂದು AUM ಹೊಸ ಬೆಳಕಾಗಿದೆ.**

"ಬಲೋಚಿಸ್ತಾನ ಮತ್ತು ಪಾಕಿಸ್ತಾನದ ಹಿಡಿತದಿಂದ ಅದರ ಮುಕ್ತಿ" ಈ ವಿಷಯವಾಗಿ ಮಾತಾಡಲು ಕೊಲ್ಕತಾ ನಗರದ ಕಲ್ಕತ್ತಾ ಕ್ಲಬ್‌ನಲ್ಲಿ ನಿಗದಿಯಾದ ಕಾರ್ಯಕ್ರಮವೊಂದನ್ನು ಪಶ್ಚಿಮ ಬಂಗಾಳದ ಪೊಲೀಸರು ಇದ್ದಕ್ಕಿದ್ದಂತೆ ತಡೆಹಿಡಿದು ರದ್ದುಗೊಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಪಾಕಿಸ್ತಾನ ಮೂಲದ ಪತ್ರಕರ್ತ ಲೇಖಕ ತಾರೇಕ್ ಫತೆಹ್ ಭಾಗವಹಿಸುವುದು ನಿಗದಿಯಾಗಿತ್ತು. ರಾಜ್ಯದ ಮುಸ್ಲಿಮರ ಪಾಕಿಸ್ತಾನ್ ಪ್ರೇಮಿ ಮಾನಸಿಕತೆಗೆ ಒಗ್ಗಿಹೋಗಿರುವ ಮಮತಾ ಬ್ಯಾನರ್ಜಿ ಅವರ ಸರ್ಕಾರವೇ ಇಂತಹ ಕ್ರಮಕ್ಕೆ ಮುಂದಾಗಿದೆ ಎನ್ನುವುದು ಕಾರ್ಯಕ್ರಮದ ರದ್ದತಿಗೆ ತಾರೆಕ್ ಫತೆಹ್ ಹೇಳುವ ಕಾರಣವಾಗಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-1-2017



# ‘ಭೀಮ್ (ಭಾರತ್ ಇಂಟರ್‌ಫೇಸ್ ಫಾರ್ ಮನಿ)’ ಮೊಬೈಲ್ ಅಪ್ಲಿಕೇಶನ್ ಬಳಸುವ ಬಗೆ

ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದ ‘ಭೀಮ್’ ಮೊಬೈಲ್ ಅಪ್ಲಿಕೇಶನ್‌ಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದ್ದು, ಮೊದಲ ನಾಲ್ಕೇ ದಿನಗಳಲ್ಲಿ ಈಗಾಗಲೇ 50 ಲಕ್ಷ ಜನರು ಡೌನ್ಲೋಡ್ ಮಾಡಿಕೊಂಡಿದ್ದು, ಅತ್ಯಂತ ಜನಪ್ರಿಯ ಮೊಬೈಲ್ ಅಪ್ಲಿಕೇಶನ್‌ಗಳ ಪಟ್ಟಿಯಲ್ಲಿ ಮೊದಲನೆ ಸ್ಥಾನದಲ್ಲಿದೆ. ನಗದು ರಹಿತ ವ್ಯವಹಾರಕ್ಕೆ ಬಳಕೆಯಾಗುವ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್) ಆಧಾರಿತ ಈ ಮೊಬೈಲ್ ಅಪ್ಲಿಕೇಶನ್ ಅನ್ನು ಎನ್.ಪಿ.ಸಿ.ಐ.(ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ) ಅಭಿವೃದ್ಧಿಗೊಳಿಸಿದೆ. ಇದರ ಬಳಕೆ ಅತ್ಯಂತ ಸರಳ, ಮೊಬೈಲ್ ಮೂಲಕ ಯಾರು ಬೇಕಾದರೂ ತಮ್ಮ ಬ್ಯಾಂಕ್ ಖಾತೆಯಿಂದ ನೇರವಾಗಿ ಹಣ ಪಾವತಿ ಮಾಡಲು ಹಾಗೂ ಹಣ ಸ್ವೀಕರಿಸಲು ಬಳಸ ಬಹುದಾಗಿದೆ. ಇದನ್ನು ಬಳಸುವ ಬಗೆಯನ್ನು ಹಂತ-ಹಂತವಾಗಿ ಈ ಕೆಳಗೆ ವಿವರಿಸಲಾಗಿದೆ.

1. ಮೊದಲು ಗೂಗಲ್ ಪ್ಲೇ ಸ್ಟೋರ್‌ಗೆ ಹೋಗಿ ಬಿಹೆಚ್‌ಐಎಮ್ ಎಂದು ಟೈಪ್ ಮಾಡಿ ಹುಡುಕಿ ಡೌನ್‌ಲೋಡ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಬೇಕು. ಐಫೋನ್ ಬಳಕೆದಾರರಾಗಿದ್ದರೆ ಐ ಟ್ಯೂನ್ ಸ್ಟೋರ್‌ಗೆ ಹೋಗಿ ಡೌನ್‌ಲೋಡ್ ಮಾಡಿಕೊಳ್ಳಬೇಕು.

2. ಭಾಷೆಯ ಆಯ್ಕೆ: ಮೊದಲ ಬಾರಿ ಓಪನ್ ಮಾಡಿದಾಗ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಸದ್ಯಕ್ಕೆ ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಮಾತ್ರ ಲಭ್ಯವಿದೆ. ಆದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಭಾಷೆಗಳ ಆಯ್ಕೆ ದೊರೆಯಲಿದೆ ಎಂದು ಎನ್.ಪಿ.ಸಿ.ಐ ಹೇಳಿದೆ.


3. ಮೊಬೈಲ್ ಸಂಖ್ಯೆ ಪರಿಶೀಲನೆ: ಇದಾದ ನಂತರ ನೀವು ಎರಡು ಸಿಮ್‌ಗಳಿರುವ ಮೊಬೈಲ್ ಬಳಸುತ್ತಿದ್ದರೆ ಒಂದು ಸಿಮ್ ಆಯ್ಕೆ ಮಾಡಿಕೊಳ್ಳಬೇಕು. ಈ ಹಂತದಲ್ಲಿ ನಿಮ್ಮ ಬ್ಯಾಂಕ್ ಖಾತೆಯೊಂದಿಗೆ ನೊಂದಾಯಿಸಲಾಗಿರುವ ಸಿಮ್ ಅಥವಾ ಮೊಬೈಲ್ ಸಂಖ್ಯೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಸಿಮ್ ಆಯ್ಕೆಯ ನಂತರ ಒಂದು ಸಂದೇಶ ರವಾನೆಯಾಗುತ್ತದೆ ಹಾಗೂ ಸ್ವಯಂಚಾಲಿತ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.


4. ನಂತರದ ಹಂತದಲ್ಲಿ 4 ಅಂಕಿಯ ಪಿನ್ನೊಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರತಿ ಬಾರಿ ಅಪ್ಲಿಕೇಶನ್ ಓಪನ್ ಮಾಡಿದಾಗ ಈ ಪಿನ್ ನಮೂದಿಸಬೇಕಾಗುತ್ತದೆ.


5. **ಬ್ಯಾಂಕ್‌ನ ಆಯ್ಕೆ:** ನಂತರದ ಹಂತದಲ್ಲಿ ಬ್ಯಾಂಕ್‌ಗಳ ಪಟ್ಟಿ ಇರುತ್ತದೆ. ಈ ಪೈಕಿ ನಮ್ಮ ಖಾತೆಯಿರುವ ಹಾಗೂ ನಮ್ಮ ಮೊಬೈಲ್ ಸಂಖ್ಯೆ ನೊಂದಿತವಾಗಿರುವ ಬ್ಯಾಂಕನ್ನು ಆಯ್ಕೆ ಮಾಡಿಕೊಳ್ಳಬೇಕು. ಬ್ಯಾಂಕ್ ಆಯ್ಕೆ ಮಾಡಿಕೊಳ್ಳುತ್ತಿದ್ದಂತೆ ಬ್ಯಾಂಕ್ ಖಾತೆಯ ವಿವರಗಳನ್ನು (ಖಾತೆ ಸಂಖ್ಯೆಯ ಕೊನೆಯ 4 ಅಂಕೆ, ಐ.ಎಫ್.ಎಸ್.ಸಿ. ಕೋಡ್) ತೋರಿಸುತ್ತದೆ.


6. ಈ ಹಂತದಲ್ಲಿ ಸ್ಕ್ರೀನ್ ಮೇಲೆ ಸೆಂಡ್, ರಿಕ್ವೆಸ್ಟ್, ಸ್ಕ್ಯಾನ್ & ಪೇ ಎಂಬ ಮೂರು ಆಯ್ಕೆಗಳು ಲಭ್ಯ. ‘ಸೆಂಡ್’ ಆಯ್ಕೆಯನ್ನು ಒತ್ತಿದರೆ ಯಾರಿಗೆ ಹಣವನ್ನು ಕಳುಹಿಸಬೇಕೋ ಅವರ ಮೊಬೈಲ್ ಸಂಖ್ಯೆ ಅಥವಾ ಪೇಮೆಂಟ್ ವಿಳಾಸವನ್ನು (ಯು.ಪಿ.ಐ. ವಿಳಾಸ) ನಮೂದಿಸಿ, ನಂತರ ಎಷ್ಟು ಹಣವೆಂದು ನಮೂದಿಸಿದರೆ ಸಾಕು, ತಕ್ಷಣ ಹಣ ಅವರ ಖಾತೆಗೆ ಜಮಾ ಆಗುತ್ತದೆ. ನೀವು ಯಾರಿಗೆ ಹಣವನ್ನು ಕಳುಹಿಸಬೇಕೋ ಅವರು ಯು.ಪಿ.ಐ. ಬಳಕೆದಾರರಲ್ಲದಿದ್ದರೂ ಹಾಗೂ ಅವರ ಬಳಿ ಮೊಬೈಲ್ ಸಂಖ್ಯೆಯಿಲ್ಲದಿದ್ದರೂ, ಅವರ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐ.ಎಫ್.ಎಸ್.ಸಿ. ಕೋಡ್ ನಮೂದಿಸುವ ಮೂಲಕವೂ ಹಣ ಕಳುಹಿಸಬಹುದಾಗಿದೆ.

7. ಸ್ಕ್ಯಾನ್ & ಪೇ ಆಯ್ಕೆಯ ಮೂಲಕ ಯಾರಿಗೆ ಹಣವನ್ನು ಕಳುಹಿಸಬೇಕೋ ಅವರ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಕಳುಹಿಸಬಹುದಾಗಿದೆ. ‘ಮೈ ಇನಫಾರ್ಮೇಶನ್’ ವಿಭಾಗದಲ್ಲಿ ‘ಟ್ರಾನ್ಸ್ಯಾಕ್ಷನ್’, ‘ಪ್ರೊಫೈಲ್’, ‘ಬ್ಯಾಂಕ್ ಅಕೌಂಟ್’ ಎಂಬ ಮೂರು ಆಯ್ಕೆಗಳಿವೆ, ಇದರಲ್ಲಿ ‘ಪ್ರೊಫೈಲ್’ ಆಯ್ಕೆಯನ್ನು ಒತ್ತಿದರೆ ನಮ್ಮ ಕ್ಯೂಆರ್ ಕೋಡ್, ಯು.ಪಿ.ಐ. ಪೇಮೆಂಟ್ ವಿಳಾಸದ ವಿವರಗಳು ದೊರೆಯುತ್ತವೆ ಹಾಗೂ ಈ ವಿವರಗಳನ್ನು ಮೆಸೇಜ್, ವಾಟ್ಸಾಪ್, ಇಮೇಲ್ ಇತ್ಯಾದಿಗಳ ಮೂಲಕ ಇತರರೊಂದಿಗೆ ಹಂಚಿಕೊಳ್ಳುವ ಆಯ್ಕೆಯೂ ಲಭ್ಯವಿದೆ. ‘ಬ್ಯಾಂಕ್ ಅಕೌಂಟ್’ ಆಯ್ಕೆಯನ್ನು ಒತ್ತಿದರೆ ಖಾತೆಯ ವಿವರ, ಯು.ಪಿ.ಐ. ಪಿನ್ ಬದಲಿಸುವ ಆಯ್ಕೆ, ಅಕೌಂಟ್ ಬ್ಯಾಲೆನ್ಸ್ ತಿಳಿಯುವ ಆಯ್ಕೆಗಳು ಲಭ್ಯ.




ಯು.ಪಿ.ಐ. ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಬಳಸಿ ಮಾಡುವ ಪ್ರತಿ ವರ್ಗಾವಣೆಯ ಮಿತಿ 10 ಸಾವಿರ ರೂ. ಆಗಿದ್ದು, ಪ್ರತಿ ದಿನದ ವಹಿವಾಟಿನ ಮಿತಿ 20 ಸಾವಿರ ರೂ. ಆಗಿರುತ್ತದೆ.




ಶ್ರೇಷ್ಠ ತತ್ವಜ್ಞಾನಿ ಆಚಾರ್ಯ ಅಭಿನವಗುಪ್ತರವರ ಜೀವನ, ಸಾಧನೆ, ಪರಂಪರೆಯನ್ನು ನೆನೆಯುವ ಸಲುವಾಗಿ ಎರಡು ದಿನಗಳ ವಿದ್ವಾಂಸರ ಸಭೆ ‘ವಿದ್ವತ್‌ಸಂಗಮ’ ವನ್ನು ಬೆಂಗಳೂರಿನ ಆರ್ಟ್ ಆಫ್ ಲೀವಿಂಗ್ ಆಶ್ರಮದಲ್ಲಿ ಜನವರಿ 6 ಹಾಗೂ 7ರಂದು ಆಯೋಜಿಸಲಾಗಿತ್ತು. ಅಭಿನವಗುಪ್ತರವರ ಜೀವನದ ಸಹಸ್ರಮಾನ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ರವಿಶಂಕರ್ ಗುರೂಜಿ, ಜಮ್ಮು-ಕಾಶ್ಮೀರದ ಉಪ ಮುಖ್ಯಮಂತ್ರಿ ಡಾ. ನಿರ್ಮಲ್ ಕುಮಾರ್ ಸಿಂಘ್, ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಸಹ-ಪ್ರಚಾರ ಪ್ರಮುಖ್ ಜೆ. ನಂದಕುಮಾರ್, ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ವಿಕಲಾಂಗರ ಆಶಾಕಿರಣ ಬೆಂಗಳೂರಿನ ‘ಜೈಪುರ್ ಫುಟ್‌ಕ್ಯಾಂಪ್’



ಕಾಲಿಲ್ಲದವರ ಕಷ್ಟ ಎಂತಹುದೆಂಬುದು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತು. ವಿಕಲಾಂಗರಾದರೂ ಕೃತಕ ಕಾಲನ್ನು ಅಳವಡಿಸಿಕೊಂಡು ನೃತ್ಯ ಮಾಡುವವರು, ಕ್ರೀಡೆಗಳಲ್ಲಿ ಭಾಗವಹಿಸುವ ಛಲ ಬಿಡದ ಸಾಧಕರನೇಕರನ್ನು ನಾವು ನೋಡಿದ್ದೇವೆ. ದುರದೃಷ್ಟವಶಾತ್ ಅನೇಕ ವಿಕಲಾಂಗರಿಗೆ, ಕೃತಕ ಕಾಲನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯವಿಲ್ಲ. ಅಂತಹವರಿಗಾಗಿ ಬೆಂಗಳೂರಿನ ಪೀಣ್ಯದ ರೋಟರಿ ಕ್ಲಬ್ ಮತ್ತು ಜೈಪುರದ ಭಗವಾನ್ ಮಹಾವೀರ ವಿಕಲಾಂಗ ಸಹಾಯತಾ ಸಮಿತಿಯ ಆಶ್ರಯದಲ್ಲಿ ನಡೆಯುವ ‘ಜೈಪುರ್ ಫುಟ್‌ಕ್ಯಾಂಪ್’ ಒಂದು ಆಶಾಕಿರಣವಾಗಿದೆ.

ಕಳೆದ 16 ವರ್ಷಗಳಿಂದ ಬೆಂಗಳೂರಿನಲ್ಲಿ ನಡೆಯುತ್ತಿರುವ (ಈ ಬಾರಿ ಜನವರಿ 3 ರಿಂದ 9 ರವರೆಗೆ) ಈ ಕ್ಯಾಂಪ್‌ನ ಪ್ರಯೋಜನ ಪಡೆದವರು ಸಾವಿರಾರು ಜನ. ಬೇರೆ ಬೇರೆ ಊರುಗಳಿಂದ ಬಂದವರಿಗೆ ಊಟ, ವಸತಿ ವ್ಯವಸ್ಥೆಯೊಂದಿಗೆ ನಡೆಯುವ ಈ ಕ್ಯಾಂಪಿನಲ್ಲಿ ಎಲ್ಲವೂ ಉಚಿತ. ಬಂದವರ ಕಾಲಿನ ಅಳತೆ ತೆಗೆದುಕೊಂಡು ಅವರವರಿಗೆ ಬೇಕಾದ ಹಾಗೆ ಕೃತಕ ಕಾಲನ್ನು ಸ್ಥಳದಲ್ಲಿಯೇ ತಯಾರಿಸಿ ಕೊಡುವ ವ್ಯವಸ್ಥೆ ಇಲ್ಲಿದೆ. ಉಚಿತವಾದರೂ ಎಲ್ಲವೂ ಅಚ್ಚುಕಟ್ಟು, ಶಿಸ್ತುಬದ್ಧ. ಕೃತಕ ಕಾಲು, ಕೈ, ಕ್ಯಾಲಿಪರ್ಸ್ ಹಾಗೂ ಗಾಲಿಕುರ್ಚಿ ಹೀಗೆ ಹಲವಾರು ತರಹದ ಅಗತ್ಯವಿರುವವರು ಇಲ್ಲಿಗೆ ಬರುತ್ತಾರೆ. ಕೇವಲ ಕರ್ನಾಟಕ ಮಾತ್ರವಲ್ಲದೇ, ಮಹಾರಾಷ್ಟ್ರ, ಕೇರಳ, ಆಂಧ್ರ, ತಮಿಳುನಾಡಿನವರೂ ಇಲ್ಲಿಗೆ ಬಂದು ಪ್ರಯೋಜನ ಪಡೆಯುತ್ತಾರೆ.

**ಕೃತಕ ಕಾಲು ತಯಾರಿಸಿಕೊಡುವ ತೋದರಮಲ್:** ಕೃತಕ ಕಾಲನ್ನು ತಯಾರಿಸುವವ ವ್ಯಕ್ತಿಯ ಕಥೆಯೂ ಒಂದು ವಿಶೇಷ. ಇಪ್ಪತ್ತು ವರ್ಷಗಳ ಹಿಂದೆ ಆತ್ಮಹತ್ಯೆಗೆ ಯತ್ನಿಸಿದಾಗ, ಕೇವಲ ಕಾಲಿನ ಮೇಲೆ ರೈಲು ಹರಿದು ಜೀವ ಉಳಿಸಿಕೊಂಡ ಜೈಪುರ ಮೂಲದ ತೋದರಮಲ್ ಸ್ವತಃ ಕೃತಕ ಕಾಲನ್ನು ಅಳವಡಿಸಿಕೊಂಡವರು. ತನ್ನಂತೆ ಕಾಲಿಲ್ಲದವರಿಗೆ ನೆರವಾಗುವುದೇ ಜೀವನದ ಧ್ಯೇಯವಾಗಿ ಸ್ವೀಕರಿಸಿರುವ ಇವರು ತಮ್ಮ ಕೆಲಸಕ್ಕೆ ರಜೆ ಹಾಕಿ ಕ್ಯಾಂಪಿಗೆ ಬಂದು ಕೃತಕ ಕಾಲು ತಯಾರಿಸುವ ಕೆಲಸದಲ್ಲಿ ನಿರತರಾಗುತ್ತಾರೆ. ದಿನವಿಡೀ ಕೆಲಸ ಮಾಡುವ ಇವರ ಸೇವೆ ಉಚಿತ! ಅಲ್ಲದೇ, ಅಡುಗೆ ಮಾಡುವವರೂ ರಾಜಾಸ್ಥಾನದವರು. ಅವರ ಸೇವೆಯೂ ಉಚಿತ!

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.